# ಫುಕುಶಿಮಾ

"ನಿಮಗೆ ಜೀವನದಲ್ಲಿ ತುಂಬಾ ಸಂತೋಷ ಉಂಟುಮಾಡುವ ವಿಷಯ ಯಾವುದು?"

"ನಮ್ಮ ತಾಯಿಯ ನೆನಪು..."

"ಆಮೇಲೆ?"

"ನಮ್ಮ ಊರಿನ ಮಣ್ಣಿನ ವಾಸನೆ..."

"ಮಣ್ಣಿಗೆ ವಾಸನೆ ಇದೆಯೆ?"

"ವಾಸನೆಯಷ್ಟೇ ಅಲ್ಲ, ಮನಸ್ಸು ಕೂಡಾ ಇದೆ."

"ನೀವು ಕವನಗಳನ್ನು ಬರೆಯುತ್ತೀರಾ?

"ಸ್ವಚ್ಛ ಕನ್ನಡದಲ್ಲಿ ಮಾತನಾಡುವವರೆಲ್ಲ ಕವಿಗಳೆ ಆಗಿರಬೇಕೆಂದಿಲ್ಲ."

"ಅದೂ ನಿಜವೇ!" ಎಂದು ಆಕೆ ನಕ್ಕಳು.

ಅವಳು ನಕ್ಕಾಗ ಎರಡು ಕೆನ್ನೆಗಳಲ್ಲೂ ಮೂಡುವ ಸುಂದರವಾದ ಗುಳಿಗಳು!

ಮುತ್ತುಗಳಂತೆ ಮಿಂಚುವ ಹಲ್ಲುಗಳ ಸಾಲು! ಜಿತೇಂದ್ರನನ್ನು ಸಮ್ಮೋಹನಗೊಳಿಸುತ್ತಿತ್ತು.

"ಶ್ಯಾಮಲಾ ಅವರೇ..."

"ಅವರೇಕಾಳು ಬಿಟ್ಟು ಹೇಳಿ..."

"ಟೋಕಿಯೊದಲ್ಲಿ ನಿಮ್ಮ ಪರಿಚಯವಾಗದಿದ್ದರೆ... ನನ್ನ ಪರಿಸ್ಥಿ

